ಈ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಅರಣ್ಯದಲ್ಲಿ ಹುಲಿ ಸಂರಕ್ಷಣೆ ಯೋಜನೆ

154 - ಶ್ರೀ ಕೆ. ಹರ್ಷಕುಮಾರ್ (ಚಾಮರಾಜ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಅರಣ್ಯದಲ್ಲಿ ಸಂರಕ್ಷಿಸಲ್ಪಟ್ಟಿರುವ ಹುಲಿಗಳ ಸಂಖ್ಯೆ ಎಷ್ಟು?

ಆ) ಹುಲಿ ಸಂರಕ್ಷಣಾ ಯೋಜನೆಗೆ ವರ್ಷ ಒಂದಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) 257

ಆ) 1989-90 ನೇ ಸಾಲಿನಲ್ಲಿ

ಯೋಜನೆ : 52.50 ಲಕ್ಷ ರೂ.

ಯೋಜನೇತರ : 42.30 ಲಕ್ಷ ರೂ.

ಒಟ್ಟು : 94.80 ಲಕ್ಷ ರೂ.

ಜಿಲ್ಲಾಪರಿಷತ್ / ಮಂಡಲ ಪಂಚಾಯತಿಗಳಲ್ಲಿ ರೋಸ್ಟರ್ ಪದ್ಧತಿ ಅಳವಡಿಕೆ

66 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾ ಪರಿಷತ್ , ಮಂಡಲ ಪಂಚಾಯತ್ ಗಳಲ್ಲಿ ರೋಸ್ಟರ್ ಪದ್ಧತಿಯನ್ನು ಅಳವಡಿಸಲಾಗಿದೆಯೇ?

ಆ) ಅಳವಡಿಸದಿದ್ದಲ್ಲಿ ಅದಕ್ಕೆ ಕಾರಣಗಳನ್ನು ಹಾಗೂ ಯಾವಾಗ ಅಳವಡಿಸಲಾಗುವುದು?

ಇ) ಅಳವಡಿಸಿದ್ದರೆ ಎಷ್ಟು ನೌಕರರಿಗೆ ರೋಸ್ಟರ್ ಪದ್ಧತಿಯನ್ನು ಅನುಸರಿಸಿ ಮುಂಬಡ್ತಿಗಳನ್ನು ನೀಡಲಾಗಿದೆ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಇಲ್ಲ

ಆ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳಿಗೆ ನೇರ ನೇಮಕಾತಿ ಬಗ್ಗೆ ಜಿಲ್ಲಾ ಪರಿಷತ್ ಸೇವಾ ಆಯೋಗವನ್ನು ರಚಿಸಿರುವುದಿಲ್ಲ. ಸದರಿ ಆಯೋಗವನ್ನು ರಚಿಸಿದ ನಂತರ ಈ ಪದ್ಧತಿಯನ್ನು ಅಳವಡಿಸಲಾಗುವುದು.

ಇ) ಮೇಲಿನ (ಆ) ಉತ್ತರದಿಂದಾಗಿ ಉದ್ಭವಿಸುವುದಿಲ್ಲ

ಪಶುವೈದ್ಯ ಶಾಲೆಗಳಿಗೆ ಔಷಧಿಗಳಿಲ್ಲದಿರುವ ಬಗ್ಗೆ

69 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಅದರಲ್ಲೂ ಮುಖ್ಯವಾಗಿ ಜಯನಗರದಲ್ಲಿರುವ ಪಶುವೈದ್ಯ ಶಾಲೆಗಳ ಸಂಖ್ಯೆ ಎಷ್ಟು? ಹಾಗೂ ಅವು ಯಾವ ಯಾವ ಸ್ಥಳಗಳಲ್ಲಿವೆ?